


'ಚಾತುರ್ಮಾಸ'- ಅಂತ ಸರಿಯಾಗಿ ಬರೆಯೋದನ್ನ ಬಿಟ್ಟು ಇದೇನು ಬರೆದಿದ್ದೀಯೋ ಮೂರ್ಖ..?




ಮಳೆ, ಬೆಳೆ, ಸಂಪತ್ತು, ಜೊತೆಗೆ 24 ಗಂಟೆಯೂ ನಮಗೆ ಬೆಳಕನ್ನು ದಯ-ಪಾಲಿಸು... ವಿಘ್ನನಿವಾರಕ!




ಶಾಲೆ 'ಮುಳುಗಡೆ' ಆಗಿದೆ ಅಂದ ಮಾತ್ರಕ್ಕೆ ಧ್ವಜಾರೋಹಣ ತಪ್ಪಿಸಲು ಸಾಧ್ಯವೇ ?




ಉರ್ದು ಅಲ್ಲಾರೀ ನನ್ನ ಕನ್ನಡ ಬರವಣಿಗೆಯೇ ಹಾಗೆ ಸರಿಯಾಗಿ ನೋಡಿ!




ನಾಣಿ: 'ಪಾಪ ಡಾಕ್ಟರ್ ಭೀಮರಾವ್ ಹೋಗ್ಬಿಟ್ಟರಂತೆ. ಇನ್ನೂ ಚಿಕ್ಕ ವಯಸ್ಸು.'

ಗುಂಡ: 'ಹೌದು! ಅವನು ನನ್ನ ಸೋದರಳಿಯ. ಫಾರಿನ್ ರಿಟರ್ನ್ಡ್! ಒಳ್ಳೇ ಹಾರ್ಟ್ ಸ್ಪೆಷಲಿಸ್ಟ್! ಇದುವರೆಗೂ ಸುಮಾರು ನೂರು ಹಾರ್ಟ್ ಆಪರೇಷನ್ ಮಾಡಿ ತುಂಬಾ ಹೆಸರು ಗಳಿಸಿದ್ದ.'

ನಾಣಿ: 'ಪಾಪ ಏನಾಗಿತ್ತೋ?'

ಗುಂಡ: 'ಹಾರ್ಟ್ ಅಟ್ಯಾಕ್!'

★★★



ನಾಣಿ: 'ಕೇಳಿದೆಯಾ ಡಾಕ್ಟರ್ ಕಪನೀಪತಿ ಆಕ್ಸಿಡೆಂಟ್‌ನಲ್ಲಿ ಅವರ ಕೈ ಮುರಿದುಕೊಂಡ್ರಂತೆ.'

ಗಂಡ: 'ಅರೆ ಹೌದಾ? ಅವರ ಕೈ ಗುಣ ಚೆನ್ನಾಗೇ ಇತ್ತಲ್ಲ.'

★★★

ವೈದ್ಯ: 'ನೋಡ್ರಿ ನಿಮ್ಮ ಹೆಂಡತಿ ಅಬ್ಬಬ್ಬಾ ಎಂದರೆ ಇನ್ನು ಮೂರು ದಿನ ಬದುಕಿರಬಹುದು.'

ಗುಂಡ: 'ಪರವಾಗಿಲ್ಲ ಬಿಡಿ! 60 ವರ್ಷ ಸುಧಾರಿಸಿದ್ದೇನೆ. ಇನ್ನು ಮೂರು ದಿನ ಯಾವ ಮಹಾ?'

★★★

ಮಹಿಳೆ: 'ಮ್ಯಾನೇಜರ್ ನನಗೆ ಒಂದು ರೂಮ್ ಬೇಕು. ಆ ಮೇಲೆ ಒಂದು ಸ್ನಾನ ಮಾಡಬೇಕು.

ಮ್ಯಾನೇಜರ್: 'ಮೇಡಂ ರೂಮ್ ಬೇಕಾದರೆ ಕೊಡ್ತೀವಿ. ಆದರೆ ನಿಮ್ಮ ಸ್ನಾನ ನೀವೇ ಮಾಡಿಕೊಳ್ಳಬೇಕು.'

(ಸಂ)ಎಂ.ಕೆ.ಮಂಜುನಾಥ